

ಈ ಎರಡೂ ಸಮಸ್ಯೆಗಳು ಮದ್ದನ್ನು ಔಷಧಿಯ ಚೀಟಿಯ ಮೇಲೆ ಈ ಔಷಧಿಗೆ ತಾನು ಜವಾಬ್ದಾರಿ ಎಂಬ ಅಲಿಖಿತ ನಿಯಮದೊಂದಿಗೆ ಸಹಿ ಹಾಕಿ, ಸೀಲು ಒತ್ತಿ ಕೊಡುವ ವೈದ್ಯನ ಹೆಗಲ ಮೇಲೆ ಇನ್ನೊಂದು ದೊಡ್ಡ ಹೊರೆಯನ್ನೇ ಹೇರಿ ಬಿಡುತ್ತದೆ. ಒಂದೆಡೆ, ತನ್ನ ಬಳಿ ಬರುವ ರೋಗಿಯನ್ನು ನಂಬಿ, ಆದಷ್ಟು ಅವನ ತೊಂದರೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಮದ್ದು ಕೊಡಬೇಕಾಗುತ್ತದೆ. ಇನ್ನೊಂದೆಡೆ ಅದೇ ಸಮಯದಲ್ಲಿ ಕೊಟ್ಟ ಮಾತ್ರೆಯ ಚೀಟಿಯ ಮೇಲೂ, ರೋಗಿಯ ಮೇಲೂ ಕಣ್ಣಿಟ್ಟು, ಮಾತ್ರೆಯ ದುರ್ಬಳಕೆ ಆಗದಂತೆ ನಿಗಾ ವಹಿಸಬೇಕಾಗುತ್ತದೆ. ಭಾರತದಲ್ಲಿ ವೈದ್ಯರಿಗೆ ಇರುವ ಒತ್ತಡಗಳ ನಡುವೆ ಸಮಯದ ಅಭಾವವೂ ಇರುವುದರಿಂದ, ವೈದ್ಯರಾದವರು ಈ ಅವಳಿ ಜವಾಬ್ದಾರಿಯನ್ನು ಹೇಗೆ ತಾನೇ ನಿಭಾಯಿಸಬಲ್ಲರು ಎನ್ನುವುದು ಯೋಚಿಸಬೇಕಾದ ವಿಷಯ.

## ದುರ್ಬಳಕೆಯ ಅವತಾರಗಳು

ಜಾಗತಿಕ ಮಟ್ಟದಲ್ಲಿ ಅವಲೋಕಿಸಿದರೆ, ಎಲ್ಲಕ್ಕಿಂತ ಜಾಸ್ತಿ ದುರ್ಬಳಕೆಯಾಗುವ ಔಷಧಿಗಳಲ್ಲಿ ನೋವು ನಿವಾರಕ ಔಷಧಿಗಳು, ಅದರಲ್ಲೂ ನಶೆ ಏರಿಸುವ ನಿದ್ರಾಜನಕ ಓಪಿಯಾಡ್ (opioids) ಪಂಗಡಕ್ಕೆ ಸೇರಿದ ಮಾತ್ರೆಗಳು ಮುಂಚೂಣಿಯಲ್ಲಿದೆ. ಇದಾದ ನಂತರ ನಿದ್ದೆಯ ಮಾತ್ರೆಗಳು,

